ಶ್ರೀ ಡಿ.ನಾಗರಾಜಯ್ಯ : ನಾನು 3ನೇ ತಾರೀಖೇ ಪತ್ರವನ್ನು ಕೊಟ್ಟಿದ್ದೇನೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, I have already discussed it with Senior Officers. Senior Officers ಜೊತೆ discuss ಮಾಡಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಉತ್ತರವನ್ನು ನೋಡಿ ಹೇಗೆ ಕೊಟ್ಟಿದ್ದಾರೆ? ಎಷ್ಟು ಚೆನ್ನಾಗಿದೆ!

ಅಧ್ಯಕ್ಷರು : This is enough. No further discussion, please

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ನಾನೇನು ನಿಯಮ 60ರ ಅಡಿಯಲ್ಲಿ ಕೊಟ್ಟಿದ್ದೆ, ಅದನ್ನು ನಿಯಮ 69ಕ್ಕೆ convert ಮಾಡಿದ್ದಾರೆ.

7. ವಿಷಯ : **ಹಾಸನ ಜಿಲ್ಲೆಯ ಎ.ಪಿ.ಎಂಸಿ. ಮಾರುಕಟ್ಟೆಯಲ್ಲಿ ಕಳಪೆ ಮಟ್ಟದ ಆಲೂಗಡ್ಡೆ ಬೀಜವನ್ನು ರೈತರಿಗೆ ವಿತರಿಸಿರುವುದರ ಬಗ್ಗೆ.**

ಡಾ. ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):– ಮಾನ್ಯ ಅಧ್ಯಕ್ಷರೆ,

➢ ಹಾಸನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 2013–14ನೇ ಸಾಲಿನಲ್ಲಿ ಬಿತ್ತನೆ ಆಲೂಗಡ್ಡೆ ವಹಿವಾಟು ಮೇ–2013 ಮತ್ತು ಜೂನ್ 2013ರ ಮಾಹೆಯಲ್ಲಿ ನಡೆದಿರುತ್ತದೆ.

➢ ದಿನಾಂಕ : 13.05.2013 ರಿಂದ 31.05.2013ರವರೆಗೆ 26540.05 ಮೆ.ಟನ್ ಮತ್ತು ದಿನಾಂಕ : 01.06.2013 ರಿಂದ ದಿನಾಂಕ : 09.06.2013ರವರೆಗೆ 3457.00 ಮೆ.ಟನ್ ಮಾರಾಟ ವಾಗಿದ್ದು, ಒಟ್ಟು 29,997.05 ಮೆ.ಟನ್ ಬಿತ್ತನೆ ಆಲೂಗಡ್ಡೆ ಮಾರಾಟವಾಗಿದೆ.

➢ ಬಿತ್ತನೆ ಆಲೂಗಡ್ಡೆಯನ್ನು 42.000 ರೈತರು ಖರೀದಿ ಮಾಡಿರುತ್ತಾರೆ.

➢ ಮೇ ತಿಂಗಳಲ್ಲಿ ಬಿತ್ತನೆ ಮಾಡಿದ ಕೆಲವು ರೈತರು ಆಲೂಗಡ್ಡೆ ಕರಗಿದೆ ಎಂದು ಹಾಸನ ಜಿಲ್ಲೆಯ ವಿವಿಧ ಭಾಗಗಳಿಂದ ದೂರು ನೀಡಿರುತ್ತಾರೆ.

ಈ ಬಗ್ಗೆ ವಿಜ್ಞಾನಿಗಳೊಂದಿಗೆ ಚರ್ಚಿಸಲಾಗಿ ಬಿತ್ತನೆ ಆಲೂಗಡ್ಡೆ ಕರಗಲು ಮುಖ್ಯ ಕಾರಣಗಳು ಈ ಕೆಳಕಂಡತಿರುತ್ತವೆ.

- ಬಿತ್ತನೆ ಆಲೂಗಡ್ಡೆ ಸಂಪೂರ್ಣವಾಗಿ ಬಲಿತಿಲ್ಲದೇ ಇರುವಾಗ
- ಬಿತ್ತನೆ ಆಲೂಗಡ್ಡೆ ಸಂಪೂರ್ಣವಾಗಿ ಬಲಿತಿಲ್ಲದೇ ಇರುವಾಗ
- ಬಿತ್ತನೆ ಆಲೂಗಡ್ಡೆಯಲ್ಲಿ ರೋಗಾಣು ಇದ್ದಾಗ
- ಬಿತ್ತನೆ ಆಲೂಗಡ್ಡೆಯನ್ನು ಶೈತ್ಯಾಗಾರಗಳಿಂದ ತೆಗೆದು ಕನಿಷ್ಠ 10–15 ದಿನಗಳವರೆಗೆ ನೆರಳಿನಲ್ಲಿ ಒಣಗಿಸದೇ ನೇರವಾಗಿ ಬಿತ್ತನೆ ಮಾಡಿದಾಗ (ಬಿತ್ತನೆ ಮಾಡುವಾಗ ಆಲೂಗೆಡ್ಡೆ ಸಿಪ್ಪೆ ಸುಕ್ಕಾಗಿ 2–3 ಮೊಳಕೆ ಕಾಣಿಸಿಕೊಂಡಿರಬೇಕು ಹಾಗೂ ಆಲೂಗಡ್ಡೆ ಕತ್ತರಿಸುವಾಗ ಕರಕ್ ಎಂದು ಶಬ್ದ ಬರಬಾರದು.)
- ಆಲೂಗಡ್ಡೆ ಬಿತ್ತನೆ ಸಂದರ್ಭದಲ್ಲಿ ಹದವಾಗಿ ಮಳೆಯಾಗದೆ ಭೂಮಿ ಹದವಾಗದೆ ಮಣ್ಣಿನಲ್ಲಿ ಉಷ್ಣಾಂಶ 20 ಡಿಗ್ರಿ ಸೆಂಟಿಗ್ರೇಡ್‌ಗಿಂತ ಹೆಚ್ಚಾಗಿದ್ದಾಗ (ಮಣ್ಣಿನ ಉಷ್ಣಾಂಶ 18–20 ಡಿಗ್ರಿ ಸೆಂಟಿಗ್ರೇಡ್ ಇದ್ದರೆ ಬಿತ್ತನೆಗೆ ಸೂಕ್ತವಾಗಿರುತ್ತದೆ.)
- ರಾಸಾಯನಿಕ ಗೊಬ್ಬರವು ಕರಗಿ ಬಿತ್ತನೆ ಆಲೂಗಡ್ಡೆ ಮೊಳಕೆ ಸಂಪರ್ಕಕ್ಕೆ ಬಂದಾಗ ಸಹ ಆಲೂಗಡ್ಡೆ ಕರಗುತ್ತದೆ.
- ಪ್ರಸ್ತುತ ಹಾಸನ ಜಿಲ್ಲೆಗೆ ಬಂದಿರುವ ಬಿತ್ತನೆ ಆಲೂಗೆಡ್ಡೆಯಲ್ಲಿ ಬಲಿತಿರುವ ಲಕ್ಷಣಗಳು ಕಂಡು ಬಂದಿರುತ್ತದೆ. ಮೇಲ್ನೋಟಕ್ಕೆ ಬಿತ್ತನೆ ಆಲೂಗಡ್ಡೆಯಲ್ಲಿ ರೋಗಾಣು ಇರುವ ಲಕ್ಷಣಗಳು ಕಂಡುಬಂದಿರುವುದಿಲ್ಲ.
- ಬಿತ್ತನೆ ಆಲೂಗಡ್ಡೆ ಕರಗಿದೆ ಎಂದು ದೂರಿರುವ ರೈತರು ಆಲೂಗಡ್ಡೆ ಖರೀದಿಸಿದ ಕೂಡಲೇ (ಅಂದರೇ ಶೈತ್ಯಾಗಾರದಿಂದ ತೆಗೆದ 3–4 ದಿನಗಳಲ್ಲಿ) ಬಿತ್ತನೆ ಮಾಡಿರಬಹುದು.
- ಮೇ ತಿಂಗಳ ಪ್ರಾರಂಭದಲ್ಲಿ ಸಾಕಷ್ಟು ಮಳೆಯಾಗದೆ ಇರುವುದರಿಂದ ಮಣ್ಣಿನ ಉಷ್ಣಾಂಶ ಹೆಚ್ಚಾಗಿ ಗಡ್ಡೆ ಕೊಳೆಯುವ ಸಾದ್ಯತೆಗಳು ಇದೆ, ಅಲ್ಲದೇ ಬಿತ್ತನೆ ಆಲೂಗಡ್ಡೆ ದಾಸ್ತಾನಿನಲ್ಲಿ 1–2 ಗಡ್ಡೆಗಳು ಹಾಳಾಗಿದ್ದ ಪಕ್ಷದಲ್ಲಿ ರೈತರೆ ಗಡ್ಡೆ ಕತ್ತರಿಸುವಾಗ ಒಂದು ಗಡ್ಡೆಯಿಂದ ಇನ್ನೊಂದು ಗಡ್ಡೆಗೆ ಸೋಂಕು ಹರಡಿ ಹಾಳಾಗುವ ಸಾದ್ಯತೆಯು ಇರಬಹುದು.

➢ ತೋಟಗಾರಿಕೆ ಇಲಾಖೆ ವತಿಯಿಂದ ಕರಪತ್ರಗಳ ಮೂಲಕ ಹಾಗೂ ಮಾಧ್ಯಮಗಳ ಮೂಲಕ ಆಲೂಗಡ್ಡೆ ಬಿತ್ತನೆ ಮಾಡುವ ವಿಧಾನಗಳ ಬಗ್ಗೆ, ಆಲೂಗಡ್ಡೆ ಬಿತ್ತನೆಗೆ ಸೂಕ್ತವಾದ ಸಮಯದ ಬಗ್ಗೆ ಹಾಗೂ ಬಿತ್ತನೆ ಬೀಜಗಳನ್ನು ಬೀಜೋಪಚಾರದ ನಂತರ 24 ಗಂಟೆ ಆರಿಸಿ ಬಿತ್ತನೆ ಮಾಡಲು ಸಾಕಷ್ಟು ಪ್ರಚಾರ ಕೈಗೊಳ್ಳಲಾಗಿದೆ.

<u>ಸರ್ಕಾರ ತೆಗೆದುಕೊಂಡ ಕ್ರಮ</u> :-

ತೋಟಗಾರಿಕೆ ಇಲಾಖೆ ವತಿಯಿಂದ ಆಲೂಗಡ್ಡೆ ವಿಶೇಷ ಪ್ಯಾಕೇಜ್ ಯೋಜನೆಯಡಿ ರೈತರಿಗೆ ನೀಡುವ ಸವಲತ್ತುಗಳನ್ನು ಎ.ಪಿ.ಎಂ.ಸಿ. ಪ್ರಾಂಗಣದಲ್ಲೇ ತಾಲ್ಲೂಕು/ಹೋಬಳಿವಾರು ಮಳಿಗೆಗಳನ್ನು ತೆರೆದು ಜೈವಿಕಗೊಬ್ಬರ ಹಾಗೂ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸಲಾಗಿರುತ್ತದೆ. ಪ್ರಸ್ತುತ ಆಯಾ ತಾಲ್ಲೂಕಿನ ತೋಟಗಾರಿಕೆ ಕಛೇರಿಗಳಲ್ಲಿ ವಿತರಣಾ ಕಾರ್ಯವು ಮುಂದುವರೆದಿದೆ. ಆಲೂಗಡ್ಡೆ ಕೊನೆ ಅಂಗಮಾರಿರೋಗ ಹಾಗೂ ಕೀಟ ನಿಯಂತ್ರಣದ ಬಗ್ಗೆ ಕರಪತ್ರಗಳನ್ನು ಸಹ ಎ.ಪಿ.ಎಂ.ಸಿ. ಪ್ರಾಂಗಣದಲ್ಲೆ ರೈತರಿಗೆ ವಿತರಿಸುವುದರಜೊತೆಗೆ ಆಲೂಗಡ್ಡೆ ಬೇಸಾಯ ಕ್ರಮಗಳ ಹಾಗೂ ರೋಗ/ಕೀಟ ನಿಯಂತ್ರಣದ ಬಗ್ಗೆ ರೈತರಿಗೆ ಮಾಹಿತಿ ನೀಡಲಾಗಿದೆ.

2013-14 ನೇ ಸಾಲಿನ ಆಲೂಗಡ್ಡೆ ವಿಶೇಷ ಪ್ಯಾಕೇಜ್ ಯೋಜನೆ ಅಡಿ ಪ್ರತಿ ಫಲಾನುಭವಿಗೆ ಶೇ.50 ರಷ್ಟು ಎಂದರೆ ಪ್ರತಿ ಹೆಕ್ಟೇರ್ ಗೆ ರೂ.5,000-00 ಗಳಂತೆ ಪ್ರತಿ ಫಲಾನುಭವಿಗೆ ಗರಿಷ್ಟ 2 ಹೆಕ್ಟೇರ್ ಪ್ರದೇಶಕ್ಕೆ ಮಿತಿಗೊಳಿಸಿ ಸಹಾಯಧನ ನೀಡಬಹುದಾಗಿದೆ. ಸದರಿ ಕಾರ್ಯಕ್ರಮಕ್ಕೆ ರೂ. 1,750-00 ಲಕ್ಷಗಳ ಆರ್ಥಿಕ ಗುರಿಗಳನ್ನು ನಿಗಧಿಪಡಿಸಲಾಗಿದ್ದು, 35,000 ಹೆಕ್ಟೇರ್ ಪ್ರದೇಶಕ್ಕೆ ನೆರವನ್ನು ಒದಗಿಸುವ ಭೌತಿಕ ಗುರಿಯನ್ನು ನಿಗಧಿಪಡಿಸಲಾಗಿದೆ. ಹಾಸನ ಜಿಲ್ಲೆಗೆ ರೂ. 11.50 ಕೋಟಿಗಳ ಅನುದಾನವನ್ನು ನಿಗಧಿಪಡಿಸಲಾಗಿದೆ.

ಮುಂದುವರೆದು ಆಲೂಗಡ್ಡೆ ಬೆಳೆಗೆ ಈ ವರ್ಷವು ಕೂಡ ಕೇಂದ್ರ ಪುರಸ್ಕೃತ ಹವಾಮಾನಾಧಾರಿತ ಬೆಳೆ ವಿಮೆ ಯೋಜನೆ ಜಾರಿಯಲ್ಲಿದು ಆಲೂಗಡ್ಡೆ ಬೆಳೆಗಾರರಿಗೆ ವಿಮೆ ಕಂತನ್ನು ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಪಾವತಿಸಲು ಪ್ರಚಾರ ನೀಡಲಾಗಿದೆ. ನೀರಾವರಿ ಆಲೂಗಡ್ಡೆ ಬೆಳೆಗೆ ಪ್ರತಿ

ಹೆಕ್ಟೇರ್‌ಗೆ ರೂ. 30,000.00 ವಿಮಾ ಮೊತ್ತವಾಗಿದ್ದು, ರೂ. 1,800.00 ವಿಮಾಕಂತು ಆಗಿರುತ್ತದೆ. ಹಾಗೆಯೇ ಮಳೆಯಾಶ್ರಿತ ಆಲೂಗಡ್ಡೆ ಬೆಳೆಗೆ ರೂ. 25,000.00 ಪ್ರತಿ ಹೆಕ್ಟೇರ್‌ಗೆ ವಿಮಾ ಮೊತ್ತವಾಗಿದ್ದು, ರೂ. 1,500.00 ವಿಮಾಕಂತು ಪಾವತಬೇಕಾಗಿರುತ್ತದೆ. ಸಾಲ ಪಡೆದ ಹಾಗೂ ಸಾಲ ಪಡೆಯದ ರೈತರಿಗೆ ದಿನಾಂಕ:31–07–2013 ರಂದು ಕೊನೆಯ ದಿನಾಂಕವಾಗಿದ್ದು, ಸಾಲ ರೈತರ ಸಾಲದ ಖಾತೆಯಿಂದ ನೇರವಾಗಿ ವಿಮಾಕಂತನ್ನು ಸಂಬಧಪಟ್ಟ ಬ್ಯಾಂಕ್‌ಗಳಿಂದ ಪಾವತಿಸಲಾಗುತ್ತದೆ.

ಅಧ್ಯಕ್ಷರು : ರೇವಣ್ಣನವರೆ, ಅವರು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಏನಾದರೂ discrepancy ಇದ್ದರೆ ಹೇಳಿ, ಮತ್ತೆ ಪ್ರಾರಂಭದಿಂದ ಹೇಳಬೇಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ತೋಟಗಾರಿಗಾ ಮಂತ್ರಿಗಳನ್ನು ಕೇಳುವುದು ಇಷ್ಟೆ. ಕಾನೂನು ಮಂತ್ರಿಗಳು ಇದ್ದಾರೆ. ಇದಕ್ಕೆ ಹೇಳಿಕೆ ಕೊಡುವ ಮಂತ್ರಿಗಳು ಯಾರು? ನೀವಾ ಕೃಷಿ ಸಚಿವರು. ತಮ್ಮ ಬಳಿ ನನ್ನ ಮನವಿ ಇಷ್ಟೆ. ನಾನು ಕೇಳಿರುವುದು 30 ಸಾವಿರ ಟನ್ ಆಲೂಗಡ್ಡೆ ಬಿತ್ತನೆ ಬೀಜ ಬಂದಿದೆ. ಅದನ್ನು 13.05.2013 ರಿಂದ ಮಾರಾಟ ಮಾಡಲು ಪ್ರಾರಂಭವಾಗಿದೆ. ಅದು certified seeds ಹೌದೋ, ಅಲ್ಲವೋ ಎಂಬ ಮಾಹಿತಿ ಬೇಕು ಇದು ಒಂದು. ಎರಡನೆಯದು, ಕಳೆದ ಬಾರಿ 1200 ರೂ. ಮಾರಾಟವಾಗಿದೆ. ಅಲ್ಲಿ ಬೀಳುವುದೇ 600 ರೂ. ಬೀಳುತ್ತದೆ. ಇಲ್ಲಿ ಎ.ಪಿ.ಎಂ.ಸಿ. ಯವರು. . . .

ಅಧ್ಯಕ್ಷರು : ಈಗ ಆಗಬೇಕಾಗಿರುವುದು ಏನು ಎಂದು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಇವು certified seeds ಅಲ್ಲ. ಕಳಪೆ ಬೀಜ ತಂದು ಕೊಟ್ಟಿದ್ದಾರೆ. ನೀವು ಕೃಷಿ ಸಚಿವರು ಮೊನ್ನೆ ಹೇಳಿದಿರಿ. ಗೊಬ್ಬರದ್ದೇನಾದರೂ ಇದ್ದರೆ ನಾವು ಹೇಳುತ್ತೇವೆ. ಯಾರಿದ್ದರೂ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು. ಇವು certified seeds ಹೌದೋ, ಅಲ್ಲವೋ ಎಂದು clarification ಕೊಡಿ. ಇದು certified seeds ಅಲ್ಲ. ಕೆಲವು ಕಡೆ ಏನಾಗುತ್ತದೆ. ಬಿತ್ತನೆ ಮಾಡಿದ 5–6 ದಿನಕ್ಕೆ ಕೊಳೆತು ಹೋಗುತ್ತವೆ.

ಅಧ್ಯಕ್ಷರು : ಮುಂದೆ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಆದರಿಂದ ಎ.ಪಿ.ಎಂ.ಸಿ. ಯವರು 1200 ರೂ.ಗಳ ಬೆಲೆಯಲ್ಲಿ ಮಾರಾಟ ಮಾಡಬೇಕಾದ್ದನ್ನು 1500–1600 ರೂ.ಗಳಿಗೆ ಮಾರಾಟ ಮಾಡುತ್ತಿದ್ದು, ಅವರನ್ನು ಯಾರೂ ಹೇಳುವವರು, ಕೇಳುವವರು ಇಲ್ಲ. ಕೃಷಿ ಸಚಿವರೆ, ನೀವೂ ರೈತರ ಮಕ್ಕಳು. ಎ.ಪಿ.ಎಂ.ಸಿ. ಯವರಿಗೆ 1500–1600 ರೂ.ಗಳಿಗೆ ಮಾರಾಟ ಮಾಡಲು ಆದೇಶ ಕೊಟ್ಟವರ್ಯಾರು? Certified seeds ಎಂದು ಹೇಳಿ ಮಾರಾಟ ಮಾಡಿ ರೈತರ ಮನೆ ಹಾಳು ಮಾಡುತ್ತಿದ್ದಾರೆ. ಅದೇ ರೀತಿ ಕಳೆದ 4 ವರ್ಷದಲ್ಲಿ.

ಅಧ್ಯಕ್ಷರು : ಕಳೆದ ವರ್ಷದ್ದೆಲ್ಲಾ ಬೇಡ. ಪ್ರಶ್ನೆ ಇಷ್ಟೆ, ನೀವು ಹೇಳುವ ಪ್ರಕಾರ. . . .

ಶ್ರೀ ಹೆಚ್.ಡಿ.ರೇವಣ : ಮಾನ್ಯ ಅಧ್ಯಕ್ಷರೆ, ಈಗ ಕೊಟ್ಟಿರುವುದು certified seeds ಹೌದೋ, ಅಲ್ಲವೋ ಒಂದು point. ಎರಡನೇ point 1200 ರೂ. ಬೆಲೆಯ ಪದಾರ್ಥವನ್ನು 1500, 1600 ರೂ.ಗಳಿಗೆ ಮಾರುತ್ತಿರುವುದು ನಿಜವೋ, ಅಲ್ಲವೋ? ಎ.ಪಿ.ಎಂ.ಸಿ. ಯವರು ಯಾವ ಆಧಾರದ ಮೇಲೆ certified seeds ಅಲ್ಲದೆ ಇರುವುದನ್ನು ಮಾರಿದರು. ಇದರ ಬಗ್ಗೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಸಾಕು. ಕೃಷಿ ಸಚಿವರು ಉತ್ತರ ಹೇಳಿ.

ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ವಿವರವಾಗಿ ನೀಡಲಾಗಿದೆ.

ಅಧ್ಯಕ್ಷರು : ಎರಡು ಪ್ರಶ್ನೆ ಅವರು ಕೇಳಿದ್ದು,certified seeds ಹೌದೋ, ಅಲ್ಲವೋ?

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಇದು ಖಾಸಗಿಯವರಿಂದ ತೆಗೆದುಕೊಂಡು ಬಂದು ಮಾರುತ್ತಿರುವುದು.

ಅಧ್ಯಕ್ಷರು : ಇಲಾಖೆಯವರಿಗೆ ಸಂಬಂಧವಿಲ್ಲ?

ಶ್ರೀ ಕೃಷ್ಣ ಭೈರೇಗೌಡ: ಇಲಾಖೆಯವರು ಸರಬರಾಜು ಮಾಡುತ್ತಿಲ್ಲ. ಮುಂದುವರೆದು ನಾನು ಹೇಳಿ ಬಿಡುತ್ತೇನೆ. ಹಿಂದೆ ಸರಬರಾಜು ಮಾಡಲು ಹೋಗಿ ರೈತರು ಅದಕ್ಕೆ ಆಸಕ್ತಿ ತೋರಿಸಲಿಲ್ಲ. ಅದಾದ ಮೇಲೆ seeds ಸರಬರಾಜು ಆಗುತ್ತಾ ಇರುವುದು ಖಾಸಗಿ ಮೂಲಗಳಿಂದ ಬರುತ್ತಾ ಇರುವುದು. ಈಗಾಗಲೇ ಗಮನಕ್ಕೆ ಬಂದ ಮೇಲೆ ಹೋಗಿ ಅದನ್ನು ಪರೀಕ್ಷೆ

ಕೂಡಾ ಮಾಡಿದ್ದಾರೆ. ಆಲೂಗಡ್ಡೆ ಬೀಜದಲ್ಲಿ ಮೂಲಭೂತವಾಗಿ ತಪ್ಪು ಇದೆಯೇ, ರೋಗ ಇದೆಯೇ ಎಂಬುದನ್ನು ಮೂಲಭೂತವಾಗಿ ಏನೂ ತಪ್ಪು ಕಂಡು ಬಂದಿಲ್ಲ. ಅವರು ಇದನ್ನು ಮಾರಾಟ ಮಾಡುತ್ತಾ ಇರುವ ಖಾಸಗಿಯವರು certified seeds ಎಂದು ಹೇಳಿ ತೆಗೆದುಕೊಂಡು ಬಂದು ಮಾರಾಟ ಮಾಡುತ್ತಿದ್ದಾರೆ. ಉಳಿದ ಎಲ್ಲಕ್ಕಿಂತ ಮೀರಿ ತಾವು ಏನು ಮಾಡಬೇಕೆಂದು ಹೇಳಿ. ಇಲಾಖಾ ವತಿಯಿಂದ ಮಾಡುವ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಹೆಚ್.ಡಿ.ರೇವಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರ ಗಮನಕ್ಕೆ ತರುವುದಿಷ್ಟೆ. ಅವು Certified seeds ಎಂಬುದಕ್ಕೆ ಏನಾದರೂ ಕಾಪಿ ಇದ್ದರೆ ಕೊಟ್ಟು ಬಿಟ್ಟರೆ ಅವರು ಏನು ಹೇಳುತ್ತಾರೋ ಅದಕ್ಕೆ ನಾನು ಭಾಗಿಯಾಗುತ್ತೇನೆ. ರೈತರನ್ನು ವಂಚಿಸುತ್ತಿದ್ದಾರೆ.

ಅಧ್ಯಕ್ಷರು : ಈಗ ಅವರು ಏನು ಮಾಡಬೇಕು ಹೇಳಿ.

ಶ್ರೀ ಹೆಚ್.ಡಿ.ರೇವಣ : ಈಗ ಅವರು ಕ್ರಮ ತೆಗೆದುಕೊಳ್ಳಬೇಕು. Certified seeds ಎಂದು ನಿಮ್ಮ ಇಲಾಖೆಯವರು ಹೇಳಿಲಿ.Certified seeds ಅಲ್ಲ ಎಂದರೆ ನೀವು ಹೇಳುವುದಕ್ಕೆ ನಾನು ಭಾಗಿಯಾಗುತ್ತೇನೆ.Certified seeds ಎನ್ನುವುದಕ್ಕೆ ಅವರ ಬಳಿ ದಾಖಲೆ ಏನಿದೆ? ಇದನ್ನು ಬಿತ್ತನೆ ಬೀಜ ಎಂದು ಮಾರಾಟ ಮಾಡುತ್ತಿದ್ದಾರೋ, ಇಲ್ಲಾ ತಿನ್ನುವ ಆಲೂಗಡ್ಡೆ ಎಂದು ಮಾರಾಟ ಮಾಡುತ್ತಿದ್ದಾರೋ? Cretified seeds ಬಿತ್ತನೆ ಬೀಜ ಎಂದು ಏನಾದರೂ ಬಿಲ್ ಕೊಟ್ಟಿದ್ದಾರಾ ಇಲಾಖೆಯವರು?

ಅಧ್ಯಕ್ಷರು : ರೇವಣ್ಣ ಅವರೂ ಕೂಡಾ certified seeds ಎಂದು ಹೇಳಿಲ್ಲ. ಇಲಾಖೆಯವರು ಹೋಗಿದ್ದಾರೆ. ಒಂದು ಕೆಲಸ ಮಾಡಿ. ಮೊನ್ನೆ ಗೊಬ್ಬರದ ವಿಚಾರದಲ್ಲಿ, you have gone to yhe root of the matter. ಅದೇ ರೀತಿ ಇದನ್ನು ಮಾಡಿಸಿ.

ಶ್ರೀ ಹೆಚ್.ಡಿ.ರೇವಣ : ನೀವು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. Certified seeds ಅಲ್ಲವೆಂದ ಮೇಲೆ ಹೇಗೆ ಎ.ಪಿ.ಎಂ.ಸಿ. ಯವರು ಮಾರಾಟ ಮಾಡುತ್ತಾರೆ?

ಅಧ್ಯಕ್ಷರು : ಆಯಿತು.

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಅವರು ವಿಚಾರವನ್ನು ಒತ್ತಿ ಕೇಳುತ್ತಿರುವುದರಿಂದ ವಿಚಾರವನ್ನು ವಿವರವಾಗಿ ಹೇಳಲು ದಯವಿಟ್ಟು ನನಗೆ ಅವಕಾಶ ಕೊಡಬೇಕು. ಖಾಸಗಿ ವ್ಯಕ್ತಿಗಳು ಪಂಚಾಬಿನಿಂದ ಕೊಂಡುಕೊಂಡು ಬಂದು ಮಾರಾಟ ಮಾಡುವುದು. ಎ.ಪಿ.ಎಂ.ಸಿ. ಯವರು ಇದನ್ನು ಸರಬರಾಜು ಮಾಡುತ್ತಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಎ.ಪಿ.ಎಂ.ಸಿ. ಯಲ್ಲಿ ಅಂಗಡಿ ಇಟ್ಟುಕೊಂಡಿರುವ ವ್ಯಕ್ತಿಗಳು ಇದನ್ನು ಅವರ ಅಂಗಡಿಯ ಮುಖಾಂತರ ಮಾರಾಟ ಮಾಡುತ್ತಿದ್ದಾರೆ. ತಾವು ಹೇಳುತ್ತಿದ್ದೀರಿ, ಇದು certified seeds ಹೌದೋ ಅಲ್ಲವೋ ಎಂಬುದನ್ನು ಅದನ್ನು ಪರೀಕ್ಷೆ ಮಾಡಿಸುವುದಕ್ಕೆ ಏನು ಬೇಕು ಅದನ್ನು ಮಾಡಿಸುತ್ತೇನೆ.

ಅಧ್ಯಕ್ಷರು : ಪರೀಕ್ಷೆ ಅಲ್ಲ. ಅಲ್ಲಿ ಯಾರು Certify ಮಾಡುವ authority ಇದ್ದಾರಲ್ಲ, ಅವರು certify ಮಾಡಿದ್ದಾರಾ ಎಂಬುದನ್ನು ಹುಡುಕಬೆಕು. ಏಕೆಂದರೆ ಅಲ್ಲಿಂದ ಬಂದಿರಬೇಕಾದರೆ, ಎಲ್ಲಿಂದ ಬಂದಿರುವುದು ಎಂಬುದು ಗೊತ್ತಿರುತ್ತದೆ.Purchase ಅಥವಾ ಸರಬರಾಜು ಮಾಡಿದವನು whether he has purchased from a certified authority? ಎಂದು ನೋಡಬೇಕಾಗುತ್ತದೆ.

ಶ್ರೀ ಕೃಷ್ಣ ಭೈರೇಗೌಡ : ಆ point ಅನ್ನೂ ಆದಷ್ಟು ಸಹ ಮುಂದಿನ ದಿನಗಳಲ್ಲಿ point ಮಾಡಿಸುವುದು. . . .

ಅಧ್ಯಕ್ಷರು : He has taken note of it.

ಶ್ರೀ ಕೃಷ್ಣ ಭೈರೇಗೌಡ : Urgent ಮಾಡಬೇಡಿ. ಮುಗಿದಿಲ್ಲ ಇನ್ನೂ ನಾನು ಹೇಳುವುದನ್ನು ಕೇಳಿಸಿಕೊಳ್ಳಿ. ಅದನ್ನು enforce ಮಾಡುವ ಪ್ರಯತ್ನವನ್ನು ನಮ್ಮ ಸರ್ಕಾರದ ಕಡೆಯಿಂದ ನಾವು ಮಾಡಿಸುತ್ತೇವೆ. ಬಿತ್ತನೆ ಮಾಡಲು ಇನ್ನೂ ಸಮಯವಿದೆ. ಅಲ್ಲಿಯವರೆಗೆ ಕಾಯುವುದಕ್ಕಿಂತ ಹೆಚ್ಚಾಗಿ ಈ ವರ್ಷವೂ ಪ್ರತಿ ವರ್ಷವೂ ಬೆಳೆ ತೆಗೆಯಲು, ಒಳ್ಳೆಉ ಬಿತ್ತನೆ ಬೀಜವನ್ನು ಪೂರೈಸಲು ಇಲಾಖೆಯವರು ಜಾಗರೂಕತೆಯಿಂದ ನಾವು, ಈಗಲಾದರೂ ಅವರಿಗೆ ಒಳ್ಳೆಯ ಬಿತ್ತನೆ ಬೀಜ ಸಿಗಲಿ ಎಂದು ಪ್ರಯತ್ನ ಮಾಡುತ್ತೇವೆ. ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ಇನ್ನು ಒಂದು ವಿಚಾರವೆಂದರೆ, ಡಿ.ಸಿ.

ರವರ ಕಡೆಯಿಂದ ಅವಶ್ಯಕತೆ ಬಿದ್ದಲ್ಲಿ inspection ಮಾಡಿಸಿ crop loss ನಲ್ಲಿ ಅದನ್ನುcover ಮಾಡಲು ಆದಷ್ಟು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಡಿ.ರೇವಣ : ತಿನ್ನುವ ಆಲೂಗಡ್ಡೆ ತಂದು certified seeds ಎಂದು ಬಿಲ್ ಹಾಕುತ್ತಿಲ್ಲ ಅವರು. ರಸೀದಿಯನ್ನು ಕೊಡುತ್ತಿಲ್ಲ. ರಸೀದಿಯನ್ನಾದರೂ ಕೊಡಲು ಹೇಳಿ. ರಸೀದಿ ಕೊಟ್ಟರೆ ಒಳ್ಳೆಯದು. ನೀವು ಹೇಳಿದಿರಿ, ಏನಾದರೂ ಬೆಳೆ ನಾಶವಾದರೆ ನಾವು ದುಡ್ಡು ಕೊಡುತ್ತೇವೆಂದು. ರಸೀದಿಯೇ ಇಲ್ಲದಿದ್ದರೆ ಏನು ಮಾಡುತ್ತಾರೆ?

ಅಧ್ಯಕ್ಷರು : ಬಹಳ simple– ಇದು. Whether it is a certified seed or not, is the question. ಅದಕ್ಕೆ ಅವರುassure ಮಡಿದ್ದಾರೆ. He will look into the matter.

ಶ್ರೀ ಹೆಚ್.ಡಿ.ರೇವಣ : ಎ.ಪಿ.ಎಂ.ಸಿ. ಯವರಿಗೆ ಮಾರಾಟ ಮಾಡಲು ಅವಕಾಶ ಇಲ್ಲ.

ಅಧ್ಯಕ್ಷರು : ಇಲ್ಲ. ಇಲ್ಲ. ಮೊದಲು inspection ಮಾಡಲಿ.

ಶ್ರೀ ಕೃಷ್ಣ ಭೈರೇಗೌಡ : ಮಾನು ಅಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ಅರ್ಥವಾಗುತ್ತದೆ.

ಅಧ್ಯಕ್ಷರು : Very good. O.k.

ಶ್ರೀ ಹೆಚ್.ಡಿ.ರೇವಣ : ಮಾನ್ಯ ಅಧ್ಯಕ್ಷರೆ, ರೈತರ ಮನೆ ಹಾಳಾಗುತ್ತಿದೆ. ನಾಲ್ಕು ವರ್ಷಗಳಿಂದ 5 ನೂರು ಕೋಟಿ ನಷ್ಟವಾಗಿದೆ.

ಶ್ರೀ ಕೃಷ್ಣ ಭೈರೇಗೌಡ : ಕೇಳಿಸಿಕೊಳ್ಳಿ, ನೀವು ಹೇಳುತ್ತಿರುವುದನ್ನು ನಾವು ಅಲ್ಲಗಳೆಯುತ್ತಿಲ್ಲ. ಮುಚ್ಚಿಟ್ಟು ನಮಗೆ ಏನೂ ಸಿಗಬೇಕಿಲ್ಲ. ಆಹಾರ ಪದಾರ್ಥಕ್ಕೆಂದು ತೆಗೆದುಕೊಂಡು ಬಂದು ಅದನ್ನು ಬಿತ್ತನೆ ಬೀಜಕ್ಕೆ ಮಾರಾಟ ಮಾಡುತ್ತಿರುವ ಸಾಧ್ಯತೆಗಳಿವೆ.

(ಗೊಂದಲ)

ಅಧ್ಯಕ್ಷರು : ಅವರೇ ಹೇಳುತ್ತಾರಲ್ಲ?

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಇವರಿಗೆ ಒಪ್ಪಿಕೊಂಡರೂ ಸಮಸ್ಯೆ, ಒಪ್ಪಿಕೊಳ್ಳದಿದ್ದರೂ ಸಮಸ್ಯೆ, ತಮಗೂ ಗೊತ್ತಿದೆ. ತಾವು ಹಾಸನ ಜಿಲ್ಲಾ ಉಸ್ತುವಾರಿಯಾಗಿ ಮಾಡಿದ್ದೀರಿ. ಇದನ್ನು ಪರಿಹಾರ ಮಾಡುವುದು ತಾವು

ಹೇಳಿದಷ್ಟು ಸಲೀಸಲ್ಲ ಎಂಬುದೂ ಸಹ ತಮಗೆ ಗೊತ್ತಿದೆ. ಹೌದೋ, ಇಲ್ಲವೋ ಸರ್? ರೈತರು ಅವರ ಬಳಿ ಕೊಂಡುಕೊಂಡು ಹೋಗುತ್ತಾರೆ. ನಮ್ಮ certification ಗೆ ರೈತರು ಏನೂ ಕಾಯುತ್ತಿಲ್ಲ. ಇದು ವ್ಯಾಪಾರಸ್ಥರು ಮತ್ತು ರೈತರ ನಡುವೆ ಸಂಬಂಧ ಇರುವ ವಿಚಾರ. ಅದರೊಳಗೆ. . . ಸರ್, ದಯವಿಟ್ಟು ಕೇಳಿಸಿಕೊಳ್ಳಿ. ಕಾನೂನಿನ ಚೌಕಟ್ಟಿನೊಳಗೆ ಆದಷ್ಟು ಸಹ ಚೀಟಿ ಆಧಾರಿತ ಬೀಜವನ್ನು ಕೊಡಲು ಪರಿಶೀಲನೆ ಮಾಡುತ್ತೇವೆ. ರೈತರು ಮತ್ತು ಡೀಲರ್ಸ್‌ಗಳ adjustment ಮೇಲೆಯೇ ನಡೆಯುತ್ತದೆ. ಅದರೊಳಗೆ ನಾವು ಹೇಗೆenforce ಮಾಡಲು ಸಾಧ್ಯ ಎಂಬುದನ್ನು ನಾವು ವಿಚಾರ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಈಗ 14ನೇ ವಿಧಾನಸಭೆಯ ಮೊದಲನೆ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ ಈ ರೀತಿ ಇದೆ.

14ನೇ ವಿಧಾನಸಭೆಯ ಮೊದಲನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

***

ಹದಿನಾಲ್ಕನೇ ವಿಧಾನಸಭೆಯ ಮೊದಲನೇ ಅಧಿವೇಶನವು ದಿನಾಂಕ 29ನೇ ಮೇ 2013 ರಿಂದ ದಿನಾಂಕ 12ನೇ ಜೂನ್ 2013 ರವರೆಗೆ ಸಮಾವೇಶಗೊಂಡ ಒಟ್ಟು 11 ದಿನಗಳಲ್ಲಿ 47 ಗಂಟೆಗಳು 37 ನಿಮಿಷಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ಹದಿನಾಲ್ಕನೇ ವಿಧಾನಸಭೆಗೆ ನೂತನವಾಗಿ ಆಯ್ಕೆಗೊಂಡ, ಒಟ್ಟು 223 ಮಾನ್ಯ ಸದಸ್ಯರುಗಳು ಘನತೆವೆತ್ತ ರಾಜ್ಯಪಾಲರಿಂದ ನೇಮಕಗೊಂಡ ಹಂಗಾಮಿ ಸಭಾಧ್ಯಕ್ಷರಾದ ಶ್ರೀ ಮಾಲಿಕಯ್ಯ ಗುತ್ತೇದಾರ್ ಇವರ ಸಮ್ಮುಖದಲ್ಲಿ ಪ್ರಮಾಣವಚನ/ಪ್ರತಜ್ಞಾವಿಧಿಯನ್ನು ಸ್ವೀಕರಿಸಿರುತ್ತಾರೆ.

ದಿನಾಂಕ: 31.05.2013 ರಂದು ಸಭಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆದು ಸಭಾಧ್ಯಕ್ಷನಾದ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿರುತ್ತದೆ.

ದಿನಾಂಕ: 3ನೇ ಜೂನ್ 2013 ರ ಸೋಮವಾರದಂದು ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ